1) ಲಗ್ಗೆರೆಯ ಜಾರಕಬಂಡೆ ಕಾವಲಿನ ಸರ್ವೇನಂ. 1 ರಲ್ಲಿ ಇಂಡಿಯನ್ ಕೆಮಿಕಲ್ ಇಂಡಸ್ಟ್ರೀಸ್‌ನಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿರುವರು?

2) ಇಂಡಿಯನ್ ಕೆಮಿಕಲ್ ಇಂಡಸ್ಟ್ರೀಸ್‌ರವರಿಗೆ ಇದರ ಬಗ್ಗೆ ನೀಡಿದ ಪರಿಹಾರವೆಷ್ಟು?

3) ಯಾವ ಉದ್ದೇಶಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡರು ಹಾಗೂ ಆ ಉದ್ದೇಶ ಕಾರ್ಯರೂಪಕ್ಕೆ ಬಂದಿದೆಯೇ?

4) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸ್ವಾಧೀನ ಪಡಿಸಿಕೊಂಡ ಸದರಿ ಜಮೀನಿನಲ್ಲಿ ಖಾಸಗಿಯವರು ಬೇನಾಮಿ ಹೆಸರಿನಲ್ಲಿ ಪರಭಾರೆ ಮಾಡುತ್ತಿರುವುದು ನಿಜವೇ?

5) ಹಾಗಿದ್ದಲ್ಲಿ, ಕಾನೂನು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು) :

1) 125 ಎಕರೆ ಜಮೀನನ್ನು ಇಂಡಿಯನ್ ಕೆಮಿಕಲ್ ಇಂಡಸ್ಟ್ರೀಸ್ ಸಂಸ್ಥೆಯಿಂದ ಸ್ವಾಧೀನಪಡಿಸಿಕೊಳ್ಳಲಾಗಿದೆ.

2) ಸ್ವಾಧೀನಪಡಿಸಿಕೊಂಡ ಜಮೀನಿನ ಪರಿಹಾರ ಮೊತ್ತ ರೂ. 49,77,889,27 ಪೈ.ಗಳು ಮಾತ್ರ ಪಾವತಿ ಮಾಡಿದೆ.

3) ಮುಂದುವರೆದ ಮಹಾಲಕ್ಷ್ಮಿ ಬಡಾವಣೆಯನ್ನು (ನಂದಿನಿ ಬಡಾವಣೆ) ನಿರ್ಮಿಸಲು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. ಉದ್ದೇಶವನ್ನು ಕಾರ್ಯರೂಪದಲ್ಲಿ ತರಲಾಗಿದೆ.

4) ಇಂತಹ ನಿದರ್ಶನಗಳು ಪ್ರಾಧಿಕಾರದ ಗಮನಕ್ಕೆ ಬಂದಿರುವುದಿಲ್ಲ.

5) ಉದ್ಭವಿಸುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ

606 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 1990-91ನೇ ಸಾಲಿನಲ್ಲಿ ವಿತರಣೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗಾಗಿ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗಾಗಿ ಎಷ್ಟು ನಿವೇಶನಗಳನ್ನು ಹಂಚಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ

610 - ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಯನಗರ ಉಕ್ಕಿನ ಕಾರ್ಖಾನೆಯ ನಿರ್ಮಾಣದ ಕೆಲಸವನ್ನು ಖಾಸಗಿ ಕ್ಷೇತ್ರಕ್ಕೆ ಕೊಡಲು ಸರ್ಕಾರ ತೀರ್ಮಾನಿಸಿರುವುದು ನಿಜವೇ?

ಅ) ಯಾವ ಯಾವ ಖಾಸಗಿ ಕಂಪನಿಗಳಿಂದ ಇದರ ನಿರ್ಮಾಣಕ್ಕಾಗಿ ಅರ್ಜಿಗಳು ಬಂದಿವೆ.

ಇ) ಇವುಗಳಲ್ಲಿ ಯಾವ ಅರ್ಜಿಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಈ) ಯಾವ ಆಧಾರದ ಮೇಲೆ ಈ ಶಿಫಾರಸ್ಸು ಮಾಡಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಈ ಪ್ರಸ್ತಾವನೆ ಜಂಟೀ ವಲಯದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವುದಾಗಿದೆ.

ಆ) 1. ಎಸ್ಸಾರ್ ಗುಜರಾತ್ ಲಿಮಿಟೆಡ್

2. ಮುಕುಂದ (ಐ) ಲಿಮಿಟೆಡ್

3. ಬರೋಕಾ ಸ್ಟೀಲ್ಸ್ ಲಿಮಿಟೆಡ್

4. ಖೋಡೆ ಡಿಸ್ಟಿಲರೀಸ್ ಲಿಮಿಟೆಡ್

5. ವಿಡಿಯೋಕಾನ್ ಇಂಟರ್‌ನ್ಯಾಷನಲ್ ಲಿಮಿಟೆಡ್

6. ಉಷಾ ರೆಫ್ಟಿಫೈರ್ಸ್ ಕಾರ್ಪೊರೇಷನ್ (ಇಂಡಿಯಾ) ಲಿಮಿಟೆಡ್.

ಇ) ಮೆ. ಎಸ್ಸಾರ್ ಗುಜರಾತ್ ಲಿಮಿಟೆಡ್

ಈ) ಅರ್ಜಿಗಳನ್ನು ಪರಿಶೀಲಿಸುವಾಗ ಸರ್ಕಾರ ರಚಿಸಿರುವ ಸಮಿತಿಯು ಈ ಕೆಳಕಂಡ ಅಂಶಗಳನ್ನು ಪರಿಗಣಿಸಿತು.

1. ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಹಾಗೂ ನಡೆಸುವ ವಿಧಾನದಲ್ಲಿ ಉದ್ದಿಮೆದಾರರಿಗೆ ಇರುವ ಅನುಭವ ಹಾಗೂ ಹಿಂದಿನ ಹಿನ್ನೆಲೆ.
2. ಈ ಯೋಜನೆಯನ್ನು ತ್ವರಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ಇರುವ ಯೋಗ್ಯತೆ.
3. ಯೋಜನೆಯ ವೆಚ್ಚ ಕಡಿಮೆ ಮಾಡಿರುವ ಪ್ರಸ್ತಾವನೆ
4. ಇಂತಹ ದೊಡ್ಡ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಅವರಿಗಿರುವ ಅನುಭವ
5. ಈ ಯೋಜನೆಗೆ ಬೇಕಾದಂತಹ ಪ್ರವರ್ತಕನ ಬಂಡವಾಳ ಶೇ. 25 ಮೊತ್ತ ರೂ. 125ರಿಂದ 250 ಕೋಟಿಯನ್ನು ಮೊದಲನೆ ಹಂತದಲ್ಲಿ ಎತ್ತುವ ಮತ್ತು ಒಟ್ಟು ರೂ. 1500ರಿಂದ 3000 ಕೋಟಿಗಳನ್ನು ಒಗ್ಗೂಡಿಸುವುದು.
6. ಯೋಜನೆಯಲ್ಲಿ ಕೆಎಸ್‌ಐಐಡಿಸಿ : ಸರ್ಕಾರ ಹೂಡಬೇಕಾದಂತಹ ಕನಿಷ್ಠ ಬಂಡವಾಳ.

ಕರ್ನಾಟಕ ಒಳನಾಡು ಮಿನುಗಾರಿಕೆ ಅಭಿವೃದ್ಧಿ ನಿಗಮವನ್ನು ಮುಚ್ಚುವ ಕಾರಣವನ್ನು ಕೇಳುವ ಬಗ್ಗೆ.

663 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಒಳನಾಡು ಮಿನುಗಾರಿಕೆ ಅಭಿವೃದ್ಧಿ ನಿಗಮವನ್ನು ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಎಷ್ಟು ಜನ ನೌಕರರಿದ್ದಾರೆ ಮತ್ತು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ?

ಇ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ಎಷ್ಟು ಜನ ಮೀನುಗಾರರಿಗೆ ಅನುಕೂಲವಾಗುತ್ತಿದೆ?